ಅಸಲು ದಾವಾ ಸಂಖ್ಯೆ - 65/2015
ಪಿಡಬ್ಲ್ಯೂ - 01
ದಿನಾಂಕಃ 29-08-2018
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಎಸ್ ಎಂ ವಕೀಲರಿಂದ.

ವಾದ ಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ವಾದ ಪತ್ರವನ್ನು ಬರೆಯಲು ಹಾಗೂ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಬರೆಯಲು ನಾನೇ ವಕೀಲರಿಗೆ ಮಾಹಿತಿಯನ್ನು ಕೊಟ್ಟಿರುತ್ತೇನೆ. ದಿನಾಂಕ 29-04-2000 ರಂದು ದಾಖಲೆಗಳು ಸುಟ್ಟಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಿನಾಂಕ 29-04-2000 ರಂದು ನೀರಿನ ಸಲುವಾಗಿ ಗಲಭೆ ಆಗಿರುವ ಬಗ್ಗೆ ನನಗೆ ಗೊತ್ತಿರುತ್ತದೆ. ನಿ.ಪಿ 5 ರಲ್ಲಿ ಅಜ್ಜನ ಹೆಸರು ಏಕೆ ನೀವು ಬರೆದಿರುತ್ತಿರಿ ಎಂದರೆ ಸಾಕ್ಷಿಯು ಬರೆದುಕೊಡು ಎಂದು ಹೇಳಿದ ಕಾರಣ ನಾನು ಬರೆದುಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿ.ಪಿ 5 ನ್ನು ನಾನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ 5 ರಲ್ಲಿ ತಾಯಿಯ ಹೆಸರು ಇರುವುದಿಲ್ಲ ಎಂದರೆ ಸರಿ.

ನಾನು ಸವಣೂರಿನ ನಮ್ಮ ಮನೆಯಲ್ಲಿ ಜನಿಸಿರುತ್ತೇನೆ. ನನ್ನ ತಾಯಿಯ ತವರು ಮನೆ ಸವಣೂರ ಇರುತ್ತದೆ. ನನ್ನ ತಾಯಿಯ ತವರು ಮನೆಯ ಅಡ್ಡ ಹೆಸರು ಒಂಟಿ ಇರುತ್ತದೆ. ನನ್ನ ತಾಯಿಯ ಹೆಸರು ಶಾಬಿಬಿ ಇರುತ್ತದೆ. ನನ್ನ ತಾಯಿಗೆ ಇನ್ನೊಂದು ಹೆಸರು ಇರುವುದಿಲ್ಲ. ನನ್ನ ತಾಯಿಗೆ ಮೂರು ಜನ ಮಕ್ಕಳು ಇರುತ್ತೇವೆ. ಶಾಬಿಬಿ ಗೆ ಇರುವ ಮೂರು ಜನ ಮಕ್ಕಳಲ್ಲಿ ನಾನು ಒಬ್ಬ, ಮಖಬೂಲಖಾನ ಮತ್ತು ಖುರ್ಷಿದಬಿ ಇರುತ್ತಾರೆ. ಖುರ್ಷಿದಬಿ ಹಾಗೂ ಮಖಬೂಲಖಾನ ಇವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮಖಬೂಲಖಾನ ಮೃತಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಂತರ ನನ್ನ ತಾಯಿ ಮೃತಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಂತರ ಇವರ ತಾಯಿ ತೀರಿಕೊಂಡ ಒಂದು ವರ್ಷದ ನಂತರ ಇವರ ತಂಗಿ ಮೃತಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ, ನನ್ನ ತಮ್ಮ, ತಾಯಿ, ತಂಗಿ ಇವರ ಮರಣ ದಾಖಲೆಗಳನ್ನು ಹಾಜರಪಡಿಸಿರುವುದಿಲ್ಲ. ಇವರ ಮರಣ ದಾಖಲೆಗಳನ್ನು ನಾನು ಹಾಜರುಪಡಿಸಲು ತಯಾರು ಇರುತ್ತೇನೆ.

ಪ್ರತಿವಾದಿಯ ತಂದೆಯವರು ಕೃಷಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಪ್ರತಿವಾದಿಯ ತಂದೆಯವರು ಕೃಷಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ ಎಷ್ಟು ಸಂಬಳ ಪಡೆಯುತ್ತಿದ್ದರು ಎಂದರೆ ಸಾಕ್ಷಿಯು ಮೊದಲಿಗೆ 1956 ನೇ ಇಸ್ವಿಯಲ್ಲಿ 260 ರೂಗಳ ಸಂಬಳವನ್ನು ಪಡೆಯುತ್ತಿದ್ದರು ಎಂದು ನುಡಿಯುತ್ತಾರೆ. ಪ್ರತಿವಾದಿಯು ಶಖೀರಾಬಾನು ಎಂಬ ತಂಗಿಯನ್ನು ಹೊಂದಿರುತ್ತಾರೆ ಎಂದರೆ ಸರಿ. ಪ್ರತಿವಾದಿಯ ತಾಯಿಯಾದ ಮೀರಾಂಬಿ ಇರುತ್ತಾರೆ ಎಂದರೆ ಸರಿ. ಪ್ರತಿವಾದಿಯ ತಂದೆಯ ಹೆಸರು ಅಬ್ದುಲಹಮೀದಖಾನ ಜಾಫರಖಾನ ಪಠಾಣ ಇರುತ್ತದೆ. ನೌಕರನ ಸೇವಾ ಪುಸ್ತಕದಲ್ಲಿ ಅವರ ಕುಟುಂಬದ ಸದಸ್ಯರ ವಿವರಗಳನ್ನು ತಿಳಿಸಿರುತ್ತಾರೆ ಎಂದರೆ ಸರಿ. ನನ್ನ ತಂದೆಯ ಸೇವಾ ಪುಸ್ತಕವನ್ನು ನಾನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ.

ಈ ಹಂತದಲ್ಲಿ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.